ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:**648/2025**

ಪಿ.ಡಬ್ಲ್ಯೂ-**1**
ಸಿ.ಡಬ್ಲ್ಯೂ-**1**

ಸಾಕ್ಷಿಗೆ ದಿನಾಂಕ **02-04-2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು : ಶಾಂತಮ್ಮ

ಗಂಡನ ಹೆಸರು : ಯಲ್ಲಪ್ಪ

ವಯಸ್ಸು : 45 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ರಂಗವ್ವನಹಳ್ಳಿ ಗ್ರಾಮ

<u>ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ</u>

ನ್ಯಾಯಾಲಯದ ಮುಂದೆ ಹಾಜರಿರುವ 1 ರಿಂದ 4 ನೇ ಆರೋಪಿತರು ನನ್ನ ಸಂಬಂಧಿಕರಾಗಬೇಕು. ಚಾ.ಸಾ-5 ನನ್ನ ಸೊಸೆ, ಚಾಸಾ 6 ನನ್ನ ಮಗ. ಚಾಸಾ 3 ಮತ್ತು 4 ನಮ್ಮ ಗ್ರಾಮದವರು.

ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಜಗಳ ನಡೆದಿಲ್ಲ. ಆರೋಪಿತರು ನಮ್ಮ ಮೇಲೆ ಯಾವುದೇ ಹಲ್ಲೇ ಮಾಡಿರುವುದಿಲ್ಲ . ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ. ನಾವು ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ. ಘಟನೆಗೆ ಸಂಬಂಧಿಸಿದಂತೆ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಸಾಕ್ಷಿಯು ಹೇಳಿಕೆ ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಹೇಳಿಕೆಯನ್ನು ನಿಪಿ-01 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-01(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ಸ್ಥಳ ಪಂಚನಾಮೆ ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಒಂದು ಪೊಟೋವನ್ನು ನಿಪಿ-04 ಎಂದು ಗುರುತಿಸಲಾಯಿತು.

ನನ್ನ ಸಮಕ್ಷಮ ಪೊಲೀಸರು ಮಹಜರ್ ಮಾಡಿ ಯಾವುದೇ ಸ್ವತ್ತನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಿಪಿ-1 ರಿಂದ 3 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಿಪಿ-4 ರ ಪೊಟೋ ಯಾವ ಕಾರಣಕ್ಕೆ ತೆಗೆಯಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ . ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನೋಡಿ ಗುರುತಿಸಿರುವುದಿಲ್ಲ.

**(**ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು**)**

<u>ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ</u>

ದಿಃ 27.03.2025 ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ 5 ರವರು ನಮ್ಮ ಹೊಲದಲ್ಲಿರುವ ಮನೆಯಲ್ಲಿರುವಾಗ 1 ರಿಂದ 4 ನೇ ಆರೋಪಿಗಳು ನಮ್ಮ ಹತ್ತಿರ ಬಂದು ಜಮೀನಿನ ವಿಚಾರವಾಗಿ ನಮಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ . 4 ನೇ ಆರೋಪಿ ಅಲ್ಲೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ನನ್ನ ತಲೆಗೆ ಹೊಡೆದು ರಕ್ತಗಾಯಪಡಿಸಿದರು ಎಂದರೆ ಸರಿಯಲ್ಲ . ಕೈ ಯಿಂದ ನನ್ನ ಎದೆಗೆ ಎರಡು ಬಾರಿ ಹೊಡೆದು ನೋವುಂಟು ಮಾಡಿದರು ಎಂದರೆ ಸರಿಯಲ್ಲ . ಚಾಸಾ 5 ರವರು ಜೋರಾಗಿ ಕೂಗಿಕೊಂಡು ಗಲಾಟೆ ಬಿಡಿಸಿದರು ಎಂದರೆ ಸರಿಯಲ್ಲ . ಆಗ ಅಲ್ಲಿಗೆ ಚಾಸಾ 6 ರವರು ಬಂದಿದ್ದು, ನನಗೆ ಹಲ್ಲೆ ಮಾಡಿದ ಬಗ್ಗೆ ಪ್ರಶ್ನಿಸಿದಾಗ 1 ಮತ್ತು 2 ನೇ ಆರೋಪಿ ಚಾಸಾ 6 ರವರಿಗೆ ಕೈಯಿಂದ ಹೊಡೆದು ನೋವುಂಟುಮಾಡಿದರು ಎಂದರೆ ಸರಿಯಲ್ಲ . ಆರೋಪಿಗಳು ನಮ್ಮನ್ನು ಉದ್ದೇಶಿಸಿ ನಿಮ್ಮನ್ನು ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿ ಹೋದರು ಎಂದರೆ ಸರಿಯಲ್ಲ . ನಂತರ ಚಾಸಾ 6 ರವರು ನನ್ನನ್ನು ಹೊಸದುರ್ಗ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲಿಸಿದರು ಎಂದರೆ ಸರಿಯಲ್ಲ . ಈ ಕುರಿತು ಅದೇದಿನ ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ .

ದಿನಾಂಕ 28.03.2025 ರಂದು ಪೊಲೀಸರ ಘಟನಾ ಸ್ಥಳಕ್ಕೆ ಬಂದಾಗ ನಾನು ಸ್ಥಳದಲ್ಲಿ ಹಾಜರಿದ್ದು, ಸ್ಥಳ ತೋರಿಸಿದಂತೆ ಚಾಸಾ 3 ಮತ್ತು 4 ರ ಸಮಕ್ಷಮ ನಿಪಿ-2 ರಂತೆ ಬೆಳಿಗ್ಗೆ 11.00 ರಿಂದ 11.40 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಸ್ಥಳದಲ್ಲಿ 1 ಕಲ್ಲನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಈ

ಸಂದರ್ಭದಲ್ಲಿ ನಿಪಿ-3 ರನ್ನು ಸಹ ಬರೆಯಲಾಗಿತ್ತು ಎಂದರೆ ಸರಿಯಲ್ಲ. ಹಾಗೂ ನಿಪಿ-4 ರಂತೆ ಫೋಟೋ ಸಹ ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಆರೋಪಿತರು ನಮ್ಮ ಸಂಬಂಧಿಕರು ಎಂದರೆ ಸರಿ. ಈ ಪ್ರಕರಣದಲ್ಲಿ ಆರೋಪಿತರೊಂದಿಗೆ ರಾಜೀಯಾಗಿದ್ದೇನೆಂದರೆ ಸರಿ. ರಾಜಿಯಾಗಿರುವ ಕಾರಣ ನಿಪಿ-1 ರಂತೆ ಹೇಳಿಕೆ ನೀಡಿ, ನಿಪಿ-2 ರಂತೆ ಮಹಜರ್ ಕಾಲದಲ್ಲಿ ಹಾಜರಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿಗಳ ಪರ ಶ್ರೀ ಹೆಚ್ ಎಸ್ ವಕೀಲರಿಂದ</u>

ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಏನೂ ಇಲ್ಲ ಎಂದು ಸಲ್ಲಿಸುತ್ತಾರೆ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೆ.ಸರಿ ಇದೆ.

(ಪ್ರಸನ್ನಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹೊಸದುರ್ಗ.